ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 637/2022

ಸಿ ಡಬ್ಲ್ಯೂ-6

ಪಿ ಡಬ್ಲ್ಯೂ-4

ದಿಃ 26-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಶ್ರೀಪಾದ ತಂಡೇಲ್ |
| ತಂದೆಯ ಹೆಸರುಃ | ದತ್ತ ತಾಂಡೇಲ್ |
| ವಯಸ್ಸುಃ | 63 ವರ್ಷ |
| ಉದ್ಯೋಗಃ | ಮೀನುಗಾರಿಕೆ |
| ವಿಳಾಸಃ | ಮಂಜಗುಣಿ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

(Accused No.3 is absent. Since there is no dispute, hence, with the consent of counsel for accused, the evidence has been recorded.)

ಚಾಸಾ-5 ರವರ ಪರಿಚಯವಿರುತ್ತದೆ. ಚಾಸಾ-7 ಮತ್ತು 8 ರವರ ಪರಿಚಯವಿರುವುದಿಲ್ಲ. ನನಗೆ ಈ ಪ್ರಕರಣದ ಮಾಹಿತಿ ಇರುವುದಿಲ್ಲ. ಕಳೆದ 2-3 ವರ್ಷಗಳ ಹಿಂದೆ ಮಂಜಗುಣಿಯಲ್ಲಿ ಪೊಲೀಸರ ಹೇಳಿಕೆಯ ಮೇರೆಗೆ ಸಹಿಯನ್ನು ಹಾಕಿರುತ್ತೇನೆ. ಯಾವ ವಿಚಾರಕ್ಕಾಗಿ ಸಹಿ ಹಾಕಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರೂ ಸಹ ಹೇಳಿರುವುದಿಲ್ಲ. ಈ ಪ್ರಕರಣದಲ್ಲಿ ಮತ್ತೆ ಏನನ್ನೂ ಮಾಡಿರುವುದಿಲ್ಲ.

ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರನ್ನು ಸಾಕ್ಷಿಯು ಗುರುತಿಸುವಲ್ಲಿ ವಿಫಲರಾಗಿರುತ್ತಾರೆ. ಮುದ್ದೆ ಮಾಲುಗಳನ್ನು ಗುರುತಿಸುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

ದಿಃ 28-05-2021 ರಂದು ಬೆಳಿಗ್ಗೆ 7.15 ಗಂಟೆಗೆ ನೀವು ನಿಮ್ಮ ಮನೆಯ ಹತ್ತಿರ ಟಾಟ ಏಸ್ ವಾಹನ ನಿಂತಿದ್ದನ್ನು ನೋಡಲನು ಹೋಗಿರುತ್ತೀರಿ ಎಂದರೆ ಸರಿಯಲ್ಲ. ಅಲ್ಲಿ ಚಾಸಾ-1 ಮತ್ತು 4 ರವರು ನಿಮ್ಮ ಊರಿನಿಂದ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನೀವು ಅಲ್ಲಿ ಹೋಗಿ ನೋಡಿದಾಗ ಟಾಟಾ ಏಸ್ ವಾಹನದಲ್ಲಿ ಒಟ್ಟು 29 ಅಕ್ಕಿ ಚೀಲಗಳು ಇದ್ದವು ಎಂದರೆ ಗೊತ್ತಿರುವುದಿಲ್ಲ. ಒಟ್ಟು 8-9 ಕ್ವಿಂಟಲ್ ಇದ್ದವು ಎಂದರೆ ಗೊತ್ತಿರುವುದಿಲ್ಲ. ಸದರಿ ಟಾಟ ಏಸ್ ವಾಹನ ಸಂಖ್ಯೆ ಕೆ ಎ 30 ಎ 0066 ಆಗಿತ್ತು ಎಂದರೆ ಸರಿಯಲ್ಲ. ಈ ವಿಷಯಕ್ಕೆ ಸಂಬಂಧಪಟ್ಟು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು. ನಂತರ ದಿಃ13-09-2021 ರಂದು ಲೇಖಾ ನಾಗಪ್ಪ ನಾಯಕ ಇವರನ್ನು ನೀವು ಪೊಲೀಸ್ ಠಾಣೆಯಲ್ಲಿ ನೋಡಿರುತ್ತೀರಿ ಎಂದರೆ ಸರಿಯಲ್ಲ. ದಿಃ20-09-2021 ರಂದು ಆನಂದು ಕೃಷ್ಣ ಶೆಟ್ಟಿ ಇವರನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ದಿಃ11-11-2021

ರಂದು 2ನೇ ಆರೋಪಿಯ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಟಾಟಾ ಏಸ್ ವಾಹನವನ್ನು ಬಿಟ್ಟು ಓಡಿ ಹೋಗಿದ್ದರ ಬಗ್ಗೆ ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಮರು ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಲಾಯಿತು. ನಿಮಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇದ್ದರೂ ಸಹ, ಆರೋಪಿತರನ್ನು ಹಾಗೂ ಮದ್ದೆ ಮಾಲುಗಳನ್ನು ಗುರುತಿಸಿದ್ದರೂ ಸಹ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿತರ ಪರ ವಕೀಲರಿಂದ ಇರುವುದಿಲ್ಲ ಎಂದು ತಿಳಿರುತ್ತಾರೆ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.